ಕರ್ನಾಟಕ ವಿಧಾನ ಸಭೆ

(ಹದಿಮೂರನೇ ವಿಧಾನಸಭೆ – ಮೂರನೇ ಅಧಿವೇಶನ)

ಗುರುವಾರ 16ನೇ ಜುಲೈ 2009ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಮಧ್ಯಾಹ್ನ 1 ಗಂಟೆ 05 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಜಗದೀಶ್‌ಶೆಟ್ಟರ್‌ರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

(ಈ ಹಂತದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷದ ಸದಸ್ಯರುಗಳು ಧರಣಿ ಮಾಡುತ್ತಾ ಸದನದ ಬಾವಿಯಲ್ಲಿ ನಿಂತಿದ್ದರು)

ಅಧ್ಯಕ್ಷರು: ಈಗ ಒಂದು ಪ್ರಕಟಣೆ ಇದೆ.

ಪ್ರಕಟಣೆ

ಶ್ರೀಯುತ ಕಂದಾಯ ಸಚಿವರಾದ ಜಿ. ಕರುಣಾಕರ ರೆಡ್ಡಿಯವರು ಈ ದಿನ ಮಧ್ಯಾಹ್ನ 1.30ಕ್ಕೆ ಮಾನ್ಯ ಸಚಿವರು ಹಾಗೂ ಶಾಸಕರುಗಳಿಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಔತಣ ಕೂಟವನ್ನು ಏರ್ಪಡಿಸಿರುತ್ತಾರೆ. ಎಲ್ಲರೂ ಈ ಔತಣ ಕೂಟದಲ್ಲಿ ಭಾಗವಹಿಸಬೇಕೆಂದು ಕೋರಿದೆ.

ಅಧ್ಯಕ್ಷರು: ಈಗ ಸದನವನ್ನು ಮತ್ತೆ ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನದ ಕಲಾಪವು 1.06 ಗಂಟೆಗೆ ಮುಕ್ತಾಯಗೊಂಡು ಮತ್ತೆ ಮಧ್ಯಾಹ್ನ 3.00 ಗಂಟೆಗೆ ಸೇರಲು ನಿರ್ಧರಿಸಿತು)

(ಸದನವು ಪುನ:4 ಗಂಟೆ 05 ನಿಮಿಷಕ್ಕೆ ಪ್ರಾರಂಭವಾದಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಎಲ್ಲಾ ಗೌರವಾನ್ವಿತ ಸದಸ್ಯರು ತಮ್ಮ ಸ್ಥಾನಕ್ಕೆ ಹೋಗಿ ಅಧಿವೇಶನ ನಡೆಸಲು ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. ಪ್ರಶ್ನೋತ್ತರ ಹಾಗೂ ಇನ್ನಿತರ ಎಲ್ಲಾ

ವಿಷಯಗಳು ಇರುತ್ತವೆ. ಮಾನ್ಯ ವಿರೋಧ ಪಕ್ಷದ ನಾಯಕರು ಈಗ ಮಾತನಾಡಲಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಕಳೆದ ಎರಡು ದಿವಸಗಳಿಂದ ನೀವು ಕೂಡ ಮಾನ್ಯ ಸದಸ್ಯರುಗಳನ್ನು ಹಾಗೂ ನಮ್ಮನ್ನು ನಿಮ್ಮ ಕೊಠಡಿಗೆ ಕರೆದು ಈ dead lock ಏನಾಗಿದೆ ಅಸೆಂಬ್ಲಿಯಲ್ಲಿ ಇದನ್ನು ಪರಿಹಾರ ಮಾಡಲಿಕ್ಕೆ ತಾವು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದೀರಿ. ನಿನ್ನೆ ಮೂರು ಭಾರಿ ನಮ್ಮನ್ನು ಕರೆದಿದ್ದೀರಿ ಮತ್ತು ಸರ್ಕಾರದ ಪ್ರತಿನಿಧಿಗಳನ್ನು ಕರೆದಿದ್ದೀರಿ. ಇವತ್ತು ಕೂಡ ಬೆಳಗ್ಗೆಯಿಂದ ಮೂರು ಭಾರಿ ಕರೆದಿದ್ದೀರಿ ಮಾನ್ಯ ಮುಖ್ಯಮಂತ್ರಿಗಳು ಕೂಡ ಸಭೆಗೆ ಬಂದಿದ್ದರು. ನಾವು ನಿಮ್ಮ ಮಧ್ಯಸ್ಥಿಕೆಯಲ್ಲಿ ನಮ್ಮ ನಿಲುವನ್ನು ಸರ್ಕಾರಕ್ಕೆ ಬಹಳ ಸ್ಪಷ್ಟವಾಗಿ ವ್ಯಕ್ತಪಡಿಸಿದ್ದೇವೆ. ಇದು ಒಂದು ಬಹುಕೋಟಿ ಹಗರಣ, ಈ ಹಗರಣದ ಹಿಂದೆ ಮಂತ್ರಿಯಾಗಿದ್ದಂಥ ಕೃಷ್ಣಯ್ಯಶೆಟ್ಟಿಯವರ ಕಾಲದಲ್ಲಿ ಆಗಿರುವಂಥದ್ದು ಮತ್ತು ಅಲ್ಲಿಯ ಹೌಸಿಂಗ್ ಬೋರ್ಡ್ ಛೇರ್ಮನ್‌ರಾದ ಜಿ.ಟಿ.ದೇವೇಗೌಡರು ಈಗಲೂ ಇದ್ದಾರೆ. ಕರ್ನಾಟಕ ನಗರ ನೀರು ಸರಬರಾಜು ಮಂಡಲಿಯ ಅಧ್ಯಕ್ಷರಾಗಿ ಮತ್ತು ಮುಜರಾಯಿ ಕಮಿಟಿಗೆ ಈ ಎರಡು ಕಮಿಟಿಗಳಲ್ಲಿ ಮಾನ್ಯ ಕೃಷ್ಣಯ್ಯಶೆಟ್ಟಿಯವರು ಅಧ್ಯಕ್ಷರಾಗಿರುತ್ತಾರೆ. ಈ ಹಗರಣದಲ್ಲಿ ರೈತರಿಗೆ ದೊಡ್ಡ ಅನ್ಯಾಯವಾಗಿದೆ, ರೈತರಿಗೆ ಶೋಷಣೆಯಾಗಿದೆ ಎಂದು ಹೇಳಬಹುದು. ಈ ಸರ್ಕಾರ ರೈತರ ಹೆಸರಿನಲ್ಲಿ ಪ್ರಮಾಣ ಮಾಡಿ ಅಧಿಕಾರಕ್ಕೆ ಬಂದಿರುತ್ತಾರೆ. ರೈತರಿಗೆ ಯಾವುದೇ ರೀತಿ ಅನ್ಯಾಯವಾಗುವುದಕ್ಕೆ ಬಿಡುವುದಿಲ್ಲ. ಅದಕ್ಕೋಸ್ಕರ ಏನು ಬೇಕಾದರೂ ಸರ್ಕಾರದಿಂದ ಮಾಡುವುದಕ್ಕೆ ತಯಾರಾಗಿದ್ದೇವೆ. ಈ ರಾಜ್ಯದ ಜನರಿಗೆ ಭರವಸೆ ಕೊಟ್ಟಿರತಕ್ಕಂಥ ಸರ್ಕಾರ. "ಜೊತೆಗೆ ನಮ್ಮ ಸರ್ಕಾರ ಪಾರದರ್ಶಕತೆಯಾಗಿ ಇರುತ್ತದೆ ನಾವು ಭ್ರಷ್ಟಾಚಾರ ವಿರುದ್ಧ ಹೋರಾಟ ಮಾಡುತ್ತೇವೆ. ನಮ್ಮ ಸರ್ಕಾರ ಎಲ್ಲಾ ಸರ್ಕಾರಕ್ಕಿಂಥ ವಿಭಿನ್ನವಾಗಿ ಇರುತ್ತದೆ, ನಾವು ಸಂವಿಧಾನ rule of Law ಹಿಡಿಯತಕ್ಕಂಥ ರೀತಿಯಲ್ಲಿ ಕೆಲಸ ಮಾಡುತ್ತೇವೆ. ನಾವು ಭ್ರಷ್ಟಾಚಾರ ಮಾಡಲಿಕ್ಕೆ ಅವಕಾಶ ಮಾಡುವುದಿಲ್ಲ"

ಎಂಬ ಭರವಸೆಯನ್ನು ಈ ಮನೆಯ ಒಳಗಡೆ ಮತ್ತು ಹೊರಗಡೆ ಹೇಳಿದ್ದಾರೆ, ಇದು ರಾಜ್ಯದ ಜನರಿಗೆ ಗೊತ್ತಿರುವಂಥ ವಿಷಯವಾಗಿದೆ.

ಶ್ರೀ ಆರ್. ಅಶೋಕ್ (ಮಾನ್ಯ ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ಅವರಿಗೆ ಮಾತನಾಡುವುದಕ್ಕೆ ಈಗ ಅವಕಾಶವನ್ನು ಕೊಟ್ಟಿದ್ದೀರಾ?

ಶ್ರೀ ಸಿದ್ದರಾಮಯ್ಯ: ಹೌದು ನಾನು ಅವರನ್ನು ಕೇಳಿ ಬಿಟ್ಟು ಮಾತನಾಡುತ್ತಿರುವುದು.

ಶ್ರೀ ಆರ್.ಅಶೋಕ್: ಮಾನ್ಯ ಅಧ್ಯಕ್ಷರೆ, ಅವರಿಗೆ ಅವಕಾಶ ಕೊಟ್ಟಿದ್ದರೆ ಸರ್ಕಾರದಿಂದ ನಮಗೂ ಮಾತನಾಡುವುದಕ್ಕೆ ರಿಪ್ಲೈ ಕೊಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಸಿದ್ದರಾಮಯ್ಯ: ನಾನು ಪರ್ಮಿಷನ್ ತೆಗೆದುಕೊಂಡೆ ಮಾತನಾಡುತ್ತಿರುವುದು.

ಶ್ರೀ ಆರ್. ಅಶೋಕ್: ವೆಲ್‌ನಲ್ಲಿರುವವರು ಏಕೆ ಓ ಎಂದು ಅಂದರು ಗೊತ್ತಾಗಲಿಲ್ಲ, ಅದಕ್ಕೆ ನಾನು ಕೇಳಿದೆ. ನಮಗೆ ಮಾತನಾಡುವುದಕ್ಕೆ ಅವಕಾಶವಿಲ್ಲವೆಂದು ಅಂದಿದ್ದಕ್ಕೆ ಓ ಅಂದಿರಾ ಅಥವಾ ಮಾತನಾಡುವುದಕ್ಕೆ ಓಕೆ ಎಂದು ಓ ಅಂದಿರಾ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ನಿಮ್ಮ ಕೊಠಡಿಯಲ್ಲಿ ನಾನು ಪ್ರತಿಪಕ್ಷದ ನಾಯಕರ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡಿದ್ದೇನೆ. ಮೊನ್ನೆ ಅವರು ನಮಗೆ clarification ಕೇಳುವುದಕ್ಕೆ ಸಮಯವನ್ನು ಕೊಡಲಿಲ್ಲ. ನಾವು ಅನೇಕ ವಿಷಯಗಳನ್ನು ಹೇಳಬೇಕೆಂದು ಇದ್ದೆವು. ನಿಮ್ಮಲ್ಲಿ ನಾನು ವಿನಂತಿಯನ್ನು ಅಲ್ಲಿಯೂ ಮಾಡಿದ್ದೇನೆ, ಇಲ್ಲಿಯೂ ಮಾಡುತ್ತೇನೆ. ದಯಮಾಡಿ ವಿವರವಾದ ಚರ್ಚೆಯನ್ನು ಮಾಡುವ ಬಗ್ಗೆ ಏನು clarification ಮಾಡುವುದಕ್ಕೆ ಅವಕಾಶವನ್ನು ಕೊಟ್ಟರೆ ನಮಗೂ ಏನೂ ಹೇಳಬೇಕೋ ಅದನ್ನು ಹೇಳುವುದಕ್ಕೆ ಅನುಕೂಲವಾಗುತ್ತದೆ. ನಾವು ಅನೇಕ ಸಂಗತಿಗಳನ್ನು ಹೇಳಬಹುದು. ಇದು

ಅಲ್ಲದೆಯೇ ಇನ್ನು ಏನಾದರೂ ಕ್ರಮವನ್ನು ತೆಗೆದುಕೊಳ್ಳಬೇಕೆಂಬ ಒತ್ತಾಯವಿದ್ದರೆ, ಈ ಬಗ್ಗೆ ನಾನು ಮೊನ್ನೆ ದಿನ ಬಂದು ನನ್ನದೇ ಆದಂತಹ ಒಂದು ಹೇಳಿಕೆಯನ್ನು ಕೊಟ್ಟಿದ್ದೇನೆ. ಈ ರೀತಿಯಾಗಿ Deputy Chief Secretary ಯಿಂದ ನಾವು ತನಿಖೆಯನ್ನು ಮಾಡಿಸುತ್ತೇವೆಂದು ಹೇಳಿದ್ದೇನೆ. ಮತ್ತೆ ಈ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವು ಮುಕ್ತರಾಗಿ ಸಿದ್ಧರಿದ್ದೇವೆ. ಸದನದ ಕಾರ್ಯಕಲಾಪಗಳು ನಡೆಯಲಿ, ಅದಕ್ಕಾಗಿ ನಾನು ಪ್ರತಿಪಕ್ಷದ ನಾಯಕರಲ್ಲಿ ವಿನಂತಿಯನ್ನು ಮಾಡುವುದೇನೆಂದರೆ, ದಯಮಾಡಿ ತಾವು ಸಹಕರಿಸಿ. ಇನ್ನು ಅನೇಕ ಸಂಗತಿಗಳನ್ನು ಅನೇಕ ಘಟನೆಗಳ ವಿಷಯದಲ್ಲಿ ನಾವು ನಿಮ್ಮ ಹತ್ತಿರ ಹೇಳುವುದಕ್ಕೆ ಸಿದ್ಧರಿದ್ದೇವೆ. ಮತ್ತೆ ಇದೇ ರೀತಿಯಾಗಿ ಹಿಂದೆ ಜಮೀನುಗಳನ್ನು ಕೊಂಡಂತಹ ಕಾಲದಲ್ಲಿ ಅಲ್ಲಿ Government value ಇದ್ದುದನ್ನು 10 ಪಟ್ಟು ಜಾಸ್ತಿ ಮಾಡಿ ಖರೀದಿ ಮಾಡಿರುತ್ತಾರೆ. ಇದೆಲ್ಲವನ್ನೂ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧಪಕ್ಷದ ನಾಯಕರು): ಅವರನ್ನು ಸಸ್ಪೆಂಡ್ ಮಾಡಲಿ, ನಮ್ಮದೇನು ತಕರಾರು ಇಲ್ಲ. We are at liberty to make a statement.

ಶ್ರೀ ಬಿ.ಎಸ್. ಯಡಿಯೂರಪ್ಪ: ನನಗೆ ಕರೆದಿದ್ದಾರೆ ನಾನು ಮಾತನಾಡುತ್ತಿದ್ದೇನೆ. ಪ್ರತಿಪಕ್ಷದ ನಾಯಕರಲ್ಲಿ ನನ್ನದು ಏನು ವಿನಂತಿ ಎಂದರೆ,

Sri Siddaramaiah: We have no objection. We are not coming in your way.

ಶ್ರೀ ಬಿ.ಎಸ್. ಯಡಿಯೂರಪ್ಪ: ಒಂದು ನಿಮಿಷ ಸಾರ್,

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ,.....

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಿದ್ದಾರೆ ಅದನ್ನು ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಿನ್ನೆಯ ದಿವಸ ನಾನು ಆ ಮನೆಯಲ್ಲಿದ್ದೆ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು submission ಮಾಡುತ್ತಿದ್ದಾರೆ. ಏನು ಹೇಳುತ್ತಾರೆ ಕೇಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ನಿನ್ನೆ ದಿನ ಈ ಮನೆಗೆ ಬರಬಾರದು ಎಂದು ಏನು ಇಲ್ಲ. ತಾವು ಹೇಳಿ ಕಳುಹಿಸಿದ ತಕ್ಷಣವೇ ಇವತ್ತು ನಾನು ಬಂದಿದ್ದೇನೆ. ಪ್ರತಿಪಕ್ಷದ ನಾಯಕರ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡಿದ್ದೇನೆ.

ಶ್ರೀ ಸಿದ್ದರಾಮಯ್ಯ: ನೀವು ಏನು ಹೇಳುತ್ತೀರೋ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಈಗಲೂ ಕೂಡ ನಾನು ನಿಮ್ಮಲ್ಲಿ ವಿನಂತಿಯನ್ನು ಮಾಡುವುದೇನೆಂದರೆ, ನಿನ್ನೆಯ ದಿನ clarification ಕೇಳುವುದಕ್ಕಾಗಲಿಲ್ಲವೆಂದು ಹೇಳಿದ್ದೀರಿ, ಈಗ ಕೇಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: Clarification....

ಶ್ರೀ ಬಿ.ಎಸ್. ಯಡಿಯೂರಪ್ಪ: ಇನ್ನು ತಾವು ಒತ್ತಾಯವನ್ನು ಮಾಡುವುದಿದ್ದರೆ. ಆ ಬಗ್ಗೆ ನಾನು ಚರ್ಚೆಯನ್ನು ಮಾಡುವುದಕ್ಕೆ ಸಿದ್ಧರಿದ್ದೇವೆ.

ಶ್ರೀ ಸಿದ್ದರಾಮಯ್ಯ: ಚರ್ಚೆ ಮಾಡುವುದಕ್ಕೆ ನಾವು ಟೈಮೇ ಕೇಳುತ್ತಿರುವುದು. Submission ಮಾಡುವುದಕ್ಕೆ ನಾವು ಟೈಮ್ ಕೇಳುತ್ತಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಕಳೆದ ಒಂದು ವರ್ಷದಿಂದ ಕಾರ್ಯಕಲಾಪಗಳು ಬೇರೆ ಬೇರೆ ಕಾರಣಗಳಿಂದಾಗಿ ಸುದೀರ್ಘವಾಗಿ ನಡೆದಿಲ್ಲ. ಯಾವುದೇ ಚರ್ಚೆಗೆ ಅವಕಾಶ ಮಾಡಿಕೊಡಲು ನಾವು ಸಿದ್ಧರಿದ್ದೇವೆ.

ಶ್ರೀ ಸಿದ್ದರಾಮಯ್ಯ: ನಾವು 40 ದಿನ ಕುಳಿತುಕೊಳ್ಳುವುದಕ್ಕೆ ತಯಾರಿದ್ದೇವೆ. ನೀವು ಸರ್ಕಾರ ಎಷ್ಟು ದಿನ ಹೇಳುತ್ತೀರೋ ಅಷ್ಟು ದಿನ ನಾವು ಸದನದಲ್ಲಿ ಕುಳಿತುಕೊಳ್ಳುವುದಕ್ಕೆ ತಯಾರಿದ್ದೇವೆ. we are ready to cooperate with the Government.

ಶ್ರೀ ಬಿ.ಎಸ್. ಯಡಿಯೂರಪ್ಪ: ಈ ದಿನ ಚರ್ಚೆ ಮುಂದುವರಿಸಿ. ಚರ್ಚೆಗೆ ನಾವು ಸಿದ್ಧರಿದ್ದೇವೆ. ಈ ಬಗ್ಗೆ ಪುನರ್ ಪರಿಶೀಲನೆ ಮಾಡುವಂತಹದ್ದು ನಿಮಗೆ convince ಆದರೆ, ಅದಕ್ಕೂ ನಾವು ಸಿದ್ದರಿದ್ದೇವೆ.

Sri Siddaramaiah: I am not going into the detail. ನಾನು ಹಿಂದೆ ಎಲ್ಲ ಮಾತನಾಡಿದ್ದೇನೆ. ಇಂದು detail ಆಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಅಭಿಪ್ರಾಯ ಏನು ಹೇಳಿದ್ದೇವೆಂದರೆ, ಕೃಷ್ಣಯ್ಯಶೆಟ್ಟಿಯವರು ಇಂದು ಕೂಡ Chairman ಆಗಿದ್ದಾರೆ. ಜಿ.ಟಿ. ದೇವೆಗೌಡರು ಸಹ Chairman ಇದ್ದಾರೆ. ಅವರಿಬ್ಬರು ಕ್ಯಾಬಿನೆಟ್ ರ್ಯಾಂಕು, Supreme Court ಮತ್ತು High Court Judgmentsಗಳು ಇವೆ. Subordinate officers ಗಳು ಅಧಿಕಾರದಲ್ಲಿರುವವರ ಮೇಲೆ ಅದರಲ್ಲೂ ಸರ್ಕಾರದಲ್ಲಿ ಇರುವಂತಹವರ ಮೇಲೆ ಯಾವುದೇ ತನಿಖೆಯನ್ನು ಮಾಡುವುದಕ್ಕೆ ವಿಚಾರಣೆಯನ್ನು ಮಾಡುವುದಕ್ಕಾಗುವುದಿಲ್ಲ. ಅದರಿಂದ justice ಸಿಗುವುದಿಲ್ಲ ಎನ್ನುವುದು ನನಗೆ ಗೊತ್ತಿರುವಂತಹ ವಿಚಾರವಾಗಿದೆ. ಇವರು Additional Chief Secretary ಯವರಿಂದ ತನಿಖೆಯನ್ನು ಮಾಡಿಸುತ್ತೇವೆಂದರೆ ಅದರಿಂದ ನ್ಯಾಯ ಸಿಗುವುದಿಲ್ಲ, ಸತ್ಯ ಹೊರಗಡೆ ಬರುವುದಿಲ್ಲ. ನಾನು ಏನು ಹೇಳುತ್ತೇನೆಂದರೆ, ನಾವು ಬಹಳ ಸರಳವಾದಂತಹದ್ದನ್ನು ಹೇಳಿದ್ದೇವೆ. ನಾವು ಅವರಿಬ್ಬರೂ ಅಧಿಕಾರದಲ್ಲಿರುವುದರಿಂದ ಅವರಿಬ್ಬರ ರಾಜೀನಾಮೆಯನ್ನು ತೆಗೆದುಕೊಳ್ಳಿ ಎಂದು ಸಲಹೆಯನ್ನು ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: Chief Secretary ಯವರಿಂದ ಬೇಕಾದರೆ ತನಿಖೆಯನ್ನು ಮಾಡಿಸಲು ನಾನು ಸಿದ್ಧ. ಯಾವುದೇ

ಅವ್ಯವಹಾರಗಳು ನಡೆದಿಲ್ಲ. ತನಿಖೆ ಬೇಕಾದರೆ, ಸತ್ಯಸಂಗತಿ ತಿಳಿಯಬೇಕಾದರೆ Chief Secretary ಅವರಿಂದ ತನಿಖೆಯನ್ನು ಮಾಡಿಸಲು ನಾನು ಸಿದ್ಧ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನಾವು ಅದಕ್ಕೆ ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. Independent Agency C.B.I.ನಿಂದ enquiry ಮಾಡಬೇಕು. ಮುಂದೆ ಈ ತರಹದ್ದು ರಾಜ್ಯದಲ್ಲಿ ಎಲ್ಲೂ ಕೂಡ ನಡೆಯಕೂಡದು. ರೈತರಿಗೆ ಅನ್ಯಾಯವಾಗಬಾರದು, ರೈತರ ಶೋಷಣೆಯಾಗಬಾರದು. ಮಧ್ಯವರ್ತಿಗಳ ಹಾವಳಿ ತಪ್ಪಬೇಕು. ಒಂದನ್ನು ನಾನು ಜ್ಞಾಪಿಸುತ್ತೇನೆ, ಮಾನ್ಯ ಅಧ್ಯಕ್ಷರೆ, ನೀವು ಪತ್ರಿಕೆಗಳನ್ನು ಓದಿರುತ್ತೀರಿ. ಮಾನ್ಯ ಕೃಷ್ಣಯ್ಯಶೆಟ್ಟಿಯವರು ಹೇಳುತ್ತಾರೆ ಪತ್ರಿಕೆಗಳಲ್ಲಿ ವರದಿಯಾಗಿದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ರಾಮನಗರದಲ್ಲಿ ಎಕರೆಗೆ 42–43 ಲಕ್ಷ ರೂಪಾಯಿಗಳನ್ನು ಕೊಟ್ಟು ಖರೀದಿ ಮಾಡಿದ್ದೀರಿ ಅದರ ಬಗ್ಗೆ ಚರ್ಚೆ ಮಾಡಿ. I am ready to discuss with you. ಈ ರೀತಿ ಕೂಗಾಡಿದರೆ ಆಗುವುದಿಲ್ಲ. ರಾಮನಗರದ ಬಗ್ಗೆ ಚರ್ಚಿಸೋಣ, ಸೂರ್ಯನಗರದ ಬಗ್ಗೆ ಚರ್ಚಿಸೋಣ. ಸತ್ಯ ಏನೆಂದು ಹೊರಗೆ ಬರಲಿ. ಸನ್ಮಾನ್ಯ ಅಧ್ಯಕ್ಷರೆ, ರಾಮನಗರದಿಂದ ಚರ್ಚೆಯಾಗಲಿ. ಇವರಿಗೆ ಮಾತ್ರ ಮಾತನಾಡಲು ಬರುತ್ತದೆ ನಮಗೆ ಬರುವುದಿಲ್ಲವೇ?

(ಗೊಂದಲ)

ಶ್ರೀ ಸಿದ್ದರಾಮಯ್ಯ: Chief Minister ಈ ತರಹ ಮಾತನಾಡುವುದು ಸರಿಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಏಕೇ ಮಾತನಾಡಬಾರದು? Speaker ಜೊತೆಯಲ್ಲಿ ನಿಮ್ಮನ್ನು ಕರೆದು ಮಾತನಾಡಿದೆವು. ನಾವು ಈಗಲೂ ವಿವರವಾದ ಚರ್ಚೆಗೆ ಸಿದ್ಧರಿದ್ದೇವೆ. ಬನ್ನಿ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಹತ್ತು ಸಾರಿ ಕರೆಯಿರಿ ನಮ್ಮ ಅಭಿಪ್ರಾಯವನ್ನು ಹೇಳುತ್ತೇವೆ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು .. .

ಶ್ರೀ ಸಿದ್ದರಾಮಯ್ಯ: ಈ ಸರ್ಕಾರ ಭ್ರಷ್ಟರ ಸರ್ಕಾರ. ಭ್ರಷ್ಟರನ್ನು ರಕ್ಷಣೆ ಮಾಡಲು ಹೊರಟಿದ್ದಾರೆ. ಭ್ರಷ್ಟರ ವಿರುದ್ಧ ಕ್ರಮವನ್ನು ತೆಗೆದುಕೊಳ್ಳುವುದು ಬಿಟ್ಟು, ನೀವು ಮಾಡಿರುವ ಹಗರಣವನ್ನು ನೋಡಿದರೆ. . . .

(ಗೊಂದಲ)

ಅಧ್ಯಕ್ಷರು: ಈ ಗೊಂದಲದಲ್ಲಿ ವೆಲ್‌ನಲ್ಲಿ ಏನು ಚರ್ಚೆ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಮಾನ್ಯ ಸದಸ್ಯರುಗಳೆಲ್ಲರೂ ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ಇಂದು ಬೆಳಿಗ್ಗೆ ನಿಮ್ಮ ಕಛೇರಿಯಲ್ಲಿ ..

(ಗೊಂದಲ)

ಅಧ್ಯಕ್ಷರು: ಏನಾದರೂ ಮಾತನಾಡುವುದಿದ್ದರೆ ನಿಮ್ಮ ಸ್ಥಾನಗಳಿಗೆ ಹೋಗಿ ಮಾತನಾಡಿ.

(ಗೊಂದಲ)

(ಈ ಹಂತದಲ್ಲಿ ವಿರೋಧಪಕ್ಷದ ಸದಸ್ಯರೆಲ್ಲರೂ ಹಾಗೂ ಜೆಡಿಎಸ್ ಪಕ್ಷದ ಸದಸ್ಯರುಗಳು ಸರ್ಕಾರದ ವಿರುದ್ಧ ಭ್ರಷ್ಟ ಸರ್ಕಾರಕ್ಕೆ ಧಿಕ್ಕಾರ, we want C.B.I. Enquiry ಎಂದು ಘೋಷಣೆ ಕೂಗುತ್ತಾ ಬಾವಿಯಿಂದ ಹೊರ ನಡೆದರು)

(ಗೊಂದಲ)

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ವಿರೋಧ ಪಕ್ಷದ ನಾಯಕರನ್ನು ಮತ್ತೆ ಇತರೆ ಪಕ್ಷದ ನಾಯಕರನ್ನು ಹಲವಾರು ಬಾರಿ ನಾವು ವಿನಂತಿ ಮಾಡಿದ್ದೇವೆ. ಈ ಸದನವನ್ನು ನಡೆಸಬೇಕು. ಈ ಸದನದಿಂದ ಕರ್ನಾಟಕದ ಐದು ಕೋಟಿ ಜನರ ಅಹವಾಲು, ಸಮಸ್ಯೆಗಳಿವೆ, ಬರ ಏನಿದೆ, ಮಳೆ ಬಂದು ಹಾನಿ ಏನಾಗಿದೆ, ಆ ವಿಷಯಗಳು ಚರ್ಚೆ ಆಗಬೇಕು. ಇದರೊಂದಿಗೆ ಹಲವಾರು ಸದಸ್ಯರು Zero Hour Question ತೆಗೆದುಕೊಂಡಿದ್ದಾರೆ. ಬಹಳ ದಿವಸಗಳಿಂದ ಅವರು ಪ್ರಯತ್ನ ಮಾಡಿ ಸ್ಟಡಿ ಮಾಡಿ ಬಂದಿದ್ದಾರೆ. ಪ್ರಶ್ನೆಗಳನ್ನು ಹಾಕಿದ್ದಾರೆ, ಅದಕ್ಕೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಬೇಕು. ಅವರು ಏನು ಆಪಾದನೆ ಮಾಡಿದ್ದಾರೆ, ಈಗಾಗಲೇ ಅದರ ಬಗ್ಗೆ ಚರ್ಚೆಯಾಗಿದೆ, ಸದನದಲ್ಲಿ ತಾವೆಲ್ಲಾ ವಿಸ್ತೃತವಾಗಿ ಒಂದು ದಿವಸದವರೆಗೆ ಚರ್ಚೆ ಮಾಡಿದ್ದೀರಿ. ಇನ್ನೂ ಹೆಚ್ಚಿನ ಚರ್ಚೆ ಮಾಡಲಿಕ್ಕೆ ನಾವೆಲ್ಲಾ ಸಿದ್ಧರಿದ್ದೇವೆಂಬ ಮಾತನ್ನು ಸ್ಪಷ್ಟಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಈ ಚರ್ಚೆಯನ್ನು ತೆಗೆದುಕೊಳ್ಳಬೇಕೆಂದು ಹೇಳಿದ ತಕ್ಷಣ immediate ಆಗಿ ಎಲ್ಲಾ ಬೇರೆ ಬೇರೆ ಕಲಾಪಗಳನ್ನು ಮುಂದೂಡಿ ತಕ್ಷಣ ಚರ್ಚೆ ತೆಗೆದುಕೊಳ್ಳಿ, ನಾನು ಚರ್ಚೆಗೆ ಸಿದ್ಧನಿದ್ದೇನೆಂದು ಮುಕ್ತ ಮನಸ್ಸಿನಿಂದ ಹೇಳಿದ್ದಾರೆಂದರೆ ಈ ಸರ್ಕಾರ ಪಾರದರ್ಶಕವಾಗಿ ಏನು ನಡೆದಿದೆ ಅದರ ಬಗ್ಗೆ ಒಂದು ಬೆಳಕನ್ನು ಚೆಲ್ಲುವ ದಿಕ್ಕಿನಲ್ಲಿ ಇರಬೇಕು ಎನ್ನುವ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳು ಸದುದ್ದೇಶದಿಂದ ಈ ಚರ್ಚೆಗೆ ಅವಕಾಶ ಕೊಟ್ಟಿದ್ದಾರೆ. ನಮಗೇನಾದರೂ ಈ ಚರ್ಚೆಯನ್ನು ಮುಂದೂಡಬೇಕೆಂದು ಮನಸ್ಸು ಇದ್ದಿದ್ದರೆ ನಾವು ಈ ಚರ್ಚೆಯನ್ನು ಮಾಡಲಿಕ್ಕೆ ಅವಕಾಶ ಕೊಡುವುದಕ್ಕೆ ನಾವು ಹಿಂದೇಟು ಹಾಕುತ್ತಿದ್ದೆವು, ಆದರೆ ಮುಖ್ಯಮಂತ್ರಿಗಳು ಚರ್ಚೆಯನ್ನು ತಕ್ಷಣ ತೆಗೆದುಕೊಳ್ಳಿ ಎಂದು ಅಧ್ಯಕ್ಷರ ಸ್ಥಾನಕ್ಕೆ ಹೇಳಿದ್ದಾರೆ. ಅಧ್ಯಕ್ಷರೇ, ಈ ಹೌಸಿಂಗ್ ಬೋರ್ಡ್ ಬಗ್ಗೆ ಏನು ಆಪಾದನೆ ಮಾಡುತ್ತಿದ್ದಾರೆ. ಅಂದರೆ 52.00 ಲಕ್ಷ ರೂಪಾಯಿಗಳಿಗೆ ಒಂದು ಎಕರೆಯನ್ನು ತೆಗೆದುಕೊಂಡಿರುವುದು ತಪ್ಪು ಎಂಬ ಮಾತನ್ನು ಹೇಳುತ್ತಿದ್ದಾರೆ ಮತ್ತು ಅಲ್ಲಿ Sub Registrar value Rs. 2.00 lakhs ಇದೆ. ಅದನ್ನು 52.00 ಲಕ್ಷ ರೂಪಾಯಿಗಳಿಗೆ ತೆಗೆದುಕೊಂಡಿದ್ದಾರೆ ಎನ್ನುವ ದೊಡ್ಡದಾದ ಸುದ್ದಿಯನ್ನು ಮಾಡುತ್ತೇವೆ. 500 ಕೋಟಿ ರೂಪಾಯಿಗಳ ಹಗರಣವಾಗಿದೆ ಎಂದು ಅವರು ಹೇಳುತ್ತಿರುವ ಮಾತು ಸತ್ಯಕ್ಕೆ ದೂರವಾದ

ಸಂಗತಿಯಾಗಿದೆ. 500 ಕೋಟಿ ರೂಪಾಯಿಗಳನ್ನು ಸರ್ಕಾರ ಖಜಾನೆಯಿಂದ ಬಿಡುಗಡೆ ಮಾಡಿಲ್ಲ. 15.00 ಕೋಟಿ ರೂಪಾಯಿಗಳನ್ನು ಮಾತ್ರ ತೆಗೆದುಕೊಂಡಿರುವುದು. 15.00 ಕೋಟಿ ರೂಪಾಯಿ ಹಣವನ್ನು ಮಾತ್ರ ಸರ್ಕಾರ ಬಿಡುಗಡೆ ಮಾಡಿದೆ. ಮಾನ್ಯ ಮುಖ್ಯಮಂತ್ರಿಗಳು ಅವರ ಗಮನಕ್ಕೆ ಬಂದ ಮೇಲೆ, ಪತ್ರಿಕೆಗಳಿಂದ ವಿಷಯ ತಿಳಿದಾಗ, ಅದಕ್ಕೆ ಮಾರ್ಚ್ ತಿಂಗಳಿನಲ್ಲಿಯೇ ಆದೇಶ ಮಾಡಿ ಅವರಿಗೆ ಇದನ್ನು ಯಾವ ಕಾರಣಕ್ಕಾಗಿ ಮಾಡುತ್ತಿದ್ದಾರೆಂದು ನನ್ನ ಗಮನಕ್ಕೆ ತಂದು ಆಮೇಲೆ ನೀವು ಮಾಡಬೇಕೆಂದೂ ಅದುವರೆಗೂ ತಡೆ ಹಿಡಿಯಬೇಕೆಂದು ಹೇಳಿ ಈಗಾಗಲೇ ಅದನ್ನು ತಡೆ ಹಿಡಿದಿದ್ದಾರೆ. ಆದ್ದರಿಂದ ಇವರು ಇದನ್ನು ಸದನದಲ್ಲಿ ಈ ದಿವಸ ಮಾತ್ರ ಚರ್ಚೆ ಮಾಡುತ್ತಿದ್ದಾರೆ, ಆದರೆ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಮಾರ್ಚ್‌ನಲ್ಲೇ ತಡೆ ಮಾಡಿ, ಈ ರೀತಿ ನಡೆಯುತ್ತಿರುವುದು ನನ್ನ ಗಮನಕ್ಕೆ ಬಂದಿದೆ ಅದನ್ನು ತಡೆ ಮಾಡಬೇಕು ಎಂಬ ಸದುದ್ದೇಶ ಮಾನ್ಯ ಮುಖ್ಯಮಂತ್ರಿಗಳಿಗೆ ಇದ್ದುದರಿಂದ ಅದನ್ನು ಮಾರ್ಚ್‌ನಲ್ಲೆ ತಡೆ ಮಾಡುವಂಥ ಕೆಲಸ ಮಾಡಿದ್ದಾರೆ. ಬೋರ್ಡ್‌ನಲ್ಲಿ ಈ ಬಗ್ಗೆ ರೆಸಲ್ಯೂಷನ್ ಆಗಿದೆ. ಇದನ್ನು ತಡೆ ಮಾಡಬೇಕು ಎಂಬ ಮಾನ್ಯ ಮುಖ್ಯಮಂತ್ರಿಯವರ ಆದೇಶದ ಮೇಲೆ ತಡೆ ಮಾಡಿದ್ದಾರೆ. ನಾನು ತಮ್ಮ ಮುಖಾಂತರ ಸದನಕ್ಕೆ ಹೇಳುವುದಕ್ಕೆ ಇಷ್ಟಪಡುವುದೇನೆಂದರೆ ಕರ್ನಾಟಕ ಗೃಹ ಮಂಡಳಿಯ ಬಗ್ಗೆ ಹಣಕಾಸು ವ್ಯವಹಾರ ನಡೆಯುತ್ತಿರುವುದು ಇದೇನು ಹೊಸದಲ್ಲ. ಹಿಂದೆ 2005–06, 2006–07 ರಲ್ಲಿ ಸೂರ್ಯನಗರ ಬಡಾವಣೆ, 2ನೇ ಹಂತ, ಆನೇಕಲ್ ತಾಲ್ಲೂಕಿನ ಹಿನ್ನಕ್ಕಿ ಗ್ರಾಮದ ಮರಸೂರು ಮತ್ತು ಲಿಂಗರಾಜಪುರ ಗ್ರಾಮದಲ್ಲಿ ಈ ಸೂರ್ಯನಗರ ಬಡಾವಣೆ ಆಗುತ್ತದೆ. ಅಲ್ಲಿ ಪ್ರತಿ ಎಕರೆಗೆ Guidance Value 1.25 ಲಕ್ಷ ರೂಪಾಯಿಗಳಿಂದ 3.00 ಲಕ್ಷ ರೂಪಾಯಿಗಳು ಇತ್ತು, ಆದರೆ ಕೊಟ್ಟಿದ್ದು 34.00 ಲಕ್ಷ ರೂಪಾಯಿಗಳು. ಅದರಲ್ಲಿ ಅಡಿಷನ್ ಏನು ಅಂದರೆ 10 ಗುಂಟೆ ಮೇಲಿರುವ ಜಮೀನಿನ ಎಲ್ಲಾ ಮಾಲೀಕರಿಗೂ 30–40' ಅಡಿ ನಿವೇಶನ ಅಂದರೆ 34.00 ಲಕ್ಷವಿರುವುದು 44.00 ಲಕ್ಷ ರೂಪಾಯಿಗಳಾಗುತ್ತವೆ. ಈ ಸೈಟು ಸೇರಿಸಿದರೆ ಒಟ್ಟು 44.00 ಲಕ್ಷ ರೂಪಾಯಿಗಳು. ಇದು ಬೆಂಗಳೂರಿನಿಂದ 30 ಕಿ.ಮೀ. ದೂರದಲ್ಲಿದೆ. ಅಂದರೆ ಈಗ ನಾನು ಹೇಳುತ್ತಿರುವುದು ಎರಡು ವರ್ಷಗಳ ಹಿಂದಿನ ಸರ್ಕಾರ ಇದ್ದಾಗ,

ಹಿಂದಿನ ಮುಖ್ಯಮಂತ್ರಿಗಳಿದ್ದಾಗ ಈ ರೀತಿಯಾದಂಥ ಒಂದು ವ್ಯವಹಾರ ನಡೆದಿದೆ. ಸದನದಲ್ಲಿ ಸನ್ಮಾನ್ಯ ಬಾಲಕೃಷ್ಣರವರು ಏನು ಹೇಳಿದರು, ಸಬ್ ರಿಜಿಸ್ಟ್ರಾರ್ value 2.00 ಲಕ್ಷ ರೂ.ಗಳಿದ್ದರೆ ಇವರು 50.00 ಲಕ್ಷ ರೂಪಾಯಿಗಳಿಗೆ ಕೊಟ್ಟಿದ್ದಾರೆಂದು ಹೇಳಿದರು, ಆದರೆ ಎರಡು ವರ್ಷಗಳ ಹಿಂದೆ ಇವರು 1.25 ಲಕ್ಷ ಇದ್ದುದನ್ನು ಸುಮಾರು 40.00 ಲಕ್ಷ ರೂಪಾಯಿಗಳಿಗೆ ಕೊಟ್ಟಿದ್ದಾರೆ. ಇವರು ಏಕೆ ಕೊಟ್ಟರು? ಇವತ್ತು ಬೆಂಗಳೂರಿನಲ್ಲಿ 2.00 ಲಕ್ಷ ರೂಪಾಯಿಗಳಿಗೆ ನೂರು ಕಿ.ಮೀ. ದೂರ ಹೋದರೂ ನಿಮಗೆ ಎಲ್ಲಿಯೂ ಜಮೀನು ಸಿಗುವುದಿಲ್ಲ. ಅದು ಎಲ್ಲರಿಗೂ ಗೊತ್ತಿರುವಂಥದ್ದು. ಇದೇ ರೀತಿ ಕೊಪ್ಪಳದಲ್ಲಿ ಜಮೀನು ಖರೀದಿಸಿದ್ದಾರೆ. ಕೊಪ್ಪಳದಲ್ಲಿ ಪ್ರತಿ ಎಕರೆಗೆ 7.00 ಲಕ್ಷ ರೂಪಾಯಿಗಳಿಗೆ 2007–08 ರಲ್ಲಿ ಖರೀದಿಸಲಾಗಿದೆ. ಇದರ ಮಾರ್ಗಸೂಚಿ ಬೆಲೆ ಕೇವಲ 40,000–00 ರೂಪಾಯಿಗಳು ಮಾತ್ರ. 2007–08 ರಲ್ಲಿ ಇದರ ಹದಿನೆಂಟು ಪಟ್ಟು extra ಕೊಟ್ಟಿದ್ದಾರೆ, ಏಕೆ ಕೊಟ್ಟಿರಿ? ಅದೇ ರೀತಿ ಮೈಸೂರಿನ ಕೆಂಚನಗೂಡಿನಲ್ಲಿ 2007–08 ರಲ್ಲಿ ಪ್ರತಿ ಎಕರೆಗೆ 16.00 ಲಕ್ಷ ರೂಪಾಯಿಗಳಷ್ಟು ಕೊಟ್ಟಿದ್ದಾರೆ. ಮಾರ್ಕೆಟ್ ಬೆಲೆ 2.00 ಲಕ್ಷ ರೂಪಾಯಿಗಳು. ಅವರು ಆಪಾದನೆ ಮಾಡುತ್ತಿರುವುದೇನೆಂದರೆ, ಇವರು 2.00 ಲಕ್ಷ ರೂಪಾಯಿಗಳ guidance value ಇದ್ದುದನ್ನು 50.00 ಲಕ್ಷ ರೂಪಾಯಿಗಳಿಗೆ ಕೊಟ್ಟಿದ್ದಾರೆನ್ನುವ ತಪ್ಪು ಮಾಹಿತಿಯನ್ನು ಮಾಧ್ಯಮದ ಮೂಲಕ ಜನಗಳಿಗೆ ಹೋಗುತ್ತಿದೆ. ಇವರು ಹಿಂದೆ ಏನೇನು ಹೌಸಿಂಗ್ ಬೋರ್ಡ್‌ನಲ್ಲಿ ಮಾಡಿದ್ದಾರೆ ಎನ್ನುವುದರ ಬಗ್ಗೆ ನಾನು ಈಗ ಹೇಳುತ್ತಿರುವುದು. ಈ ರೀತಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯಲ್ಲಿ ಯಾವುದೇ ನಿವೇಶನದ ಸಲುವಾಗಿ ನಮ್ಮಲ್ಲಿ ಅರ್ಜಿಗಳೇ ಇಲ್ಲ, ಒಂದು ಸಮೀಕ್ಷೆಯನ್ನು ನಡೆಸದೇ ಹಾಗೆ ತೆಗೆದುಕೊಂಡಿದ್ದಾರೆಂದು ಹೇಳಿದ್ದಾರೆ ಅದು ಸುಳ್ಳು. ಇದುವರೆಗೆ ಬೆಂಗಳೂರಿನ ಸುತ್ತಮುತ್ತಲಿನ ಹೊರವಲಯದಲ್ಲಿ ಎಲ್ಲಿಯಾದರೂ ಬೆಂಗಳೂರಿನ distanceನಲ್ಲಿ ನಮಗೆ ಸೈಟು ಕೊಡಿ ಎಂದು ಸೈಟಿಗೋಸ್ಕರ 1,14,640 ಅರ್ಜಿಗಳು ಸ್ವೀಕೃತವಾಗಿವೆ. ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ಇರುವ ದೇವನಹಳ್ಳಿ ಗೃಹನಿರ್ಮಾಣ ಮಂಡಳಿ, ದೇವನಹಳ್ಳಿಗೆ ಸುಮಾರು 13 ಕಿ.ಮೀ.ಅಂತರದಲ್ಲಿದೆ. ನಮ್ಮ ಜನತಾ ದಳದ ನಾಯಕರು ನೀವು ಸಮೀಕ್ಷೆ ಮಾಡದೇ ಜಮೀನು ಖರೀದಿಸಿದ್ದೀರೆಂದು ಹೇಳಿದರು, ನಾನು ಅವರನ್ನು

ಕೇಳಲಿಚ್ಛೆಪಡುತ್ತೇನೆ, ನೀವು ಬಹಳ ಸತ್ಯಹರಿಶ್ಚಂದ್ರರಿದ್ದೀರಿ, ನೀವು ರಾಮನಗರದಲ್ಲಿ ಏನು ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯ ಕಟ್ಟಬೇಕೆಂದು ಹೇಳಿ ಜಮೀನು acquisition ಆಗಿಲ್ಲ, ಟೆಂಡರ್ ಕರೆದು ಅವನಿಗೆ 30.00 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ? ನೀವು ಈ ಸರ್ಕಾರದ ಹಣವನ್ನು ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ? ನಾವಾದರೂ ಸಹ ಅವರ ಹತ್ತಿರ ಜಮೀನು ಖರೀದಿಸಿದ್ದೇವೆ. ದೇವನಹಳ್ಳಿಯಲ್ಲಿ ಜಮೀನು ಖರೀದಿಸಲಾಗಿದೆ. ನಮ್ಮ ಅಧಿಕಾರಿಗಳ ಪ್ರಕಾರ ನಾವು ಮಾರಾಟ ಮಾಡಿದರೆ ಪ್ರತಿ ಎಕರೆಗೆ 50.00 ಲಕ್ಷ ರೂಪಾಯಿಗಳಷ್ಟು ಲಾಭ ಬರುತ್ತದೆಂದು ಅಧಿಕಾರಿಗಳು ಮಾಹಿತಿಯನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು: ಅಶೋಕ್‌ರವರೇ, ನೀವು ಉತ್ತರ ಹೇಳುವಾಗ ಹೌಸಿಂಗ್ ಬೋರ್ಡ್‌ನ ಬೇರೆ ಬೇರೆ ಕಡೆಯ ವಿಷಯವನ್ನು ಹೇಳುತ್ತಿದ್ದೀರಿ, ಈ ಹೌಸಿಂಗ್ ಬೋರ್ಡ್‌ಗೆ ಸೀಮಿತವಾಗಿರುವಂತೆ ಹೇಳಿದರೆ ಚೆನ್ನಾಗಿರುತ್ತದೆ.

ಶ್ರೀ ಆರ್. ಅಶೋಕ್: ಅವರು ಏನು ಬೇರೆ ಬೇರೆ ಕಡೆಯದ್ದನ್ನು comment ಮಾಡಿದರು, ಆ commentಗೆ ನನ್ನ ಉತ್ತರವಷ್ಟೆ. ಇವರು ನಮಗೆ ಈ ರೀತಿ ತಪ್ಪು ಮಾಡಿದ್ದೀರಿ, ಏನೋ ಮಾಡಿಬಿಟ್ಟಿದ್ದಾರೆಂದು ಹೇಳುತ್ತಿದ್ದಾರೆ. ಇವರು ಯಾವ ಕಾನೂನಿನ ಆಧಾರದಲ್ಲಿ ಟೆಂಡರ್ ಕರೆದಿರಿ? ಒಂದು ಜಮೀನು ಇಲ್ಲ ಅಲ್ಲಿ, ಯಾರ ಜಮೀನು ಎಂದು ಸಮೀಕ್ಷೆ ಕೂಡ ಮಾಡಿಲ್ಲ. Acquisition ಮಾಡಬೇಕು. 4161 notification ಮಾಡಬೇಕು. ಏನೂ ಮಾಡಲಿಲ್ಲ, ಆಗಲೇ ಕಂಟ್ರಾಕ್ಟುದಾರರಿಗೆ 30.00 ಕೋಟಿ ರೂಪಾಯಿಗಳು ಸರ್ಕಾರದ ಹಣವನ್ನು ಕೊಟ್ಟುಬಿಟ್ಟಿದ್ದಾರೆ. ಅಧ್ಯಕ್ಷರೇ, 31.03.2008 ರಲ್ಲಿ ದೇವನಹಳ್ಳಿ ತಾಲ್ಲೂಕಿನಲ್ಲಿ ಧುಮ್ಮನಹಳ್ಳಿ, ಸಿಂಗನಹಳ್ಳಿ ಮತ್ತಿತರ ಗ್ರಾಮಗಳಲ್ಲಿ ಕೈಗಾರಿಕಾ ವಸಾಹತು ಕೆ.ಐ.ಎ.ಡಿ.ಬಿ. ಯಿಂದ 918 ಎಕರೆ ಜಮೀನನ್ನು 55.00 ಲಕ್ಷ ರೂಪಾಯಿಗಳಿಗೆ ಖರೀದಿಸಿದ್ದಾರೆ. ಇವತ್ತೇನು ಅವರು ಆಪಾದನೆ ಮಾಡುತ್ತಿದ್ದಾರೆ. ಇದರ ಸುತ್ತ ಮುತ್ತ 3–4 ಕಿ.ಮೀ. ಅಂತರದಲ್ಲಿರುವ ಜಾಗವನ್ನು 55.00 ಲಕ್ಷ ರೂಪಾಯಿಗಳಿಗೆ ನೀವು ಮಾರಾಟ ಮಾಡಿದ್ದೀರಿ. ಸುಮಾರು 321.00 ಕೋಟಿ ರೂಪಾಯಿಗಳಷ್ಟು ಸರ್ಕಾರದಿಂದ ಪಾವತಿಯಾಗಿದೆ. ಇದನ್ನು ಏಕೆ ಪಾವತಿ ಮಾಡಿದಿರಿ? ಇದು 31.03.2008 ರಲ್ಲಿ ಆಗಿದೆ.

ಅಧ್ಯಕ್ಷರು: ಅಶೋಕರವರೇ, ನೀವು ಹೌಸಿಂಗ್ ಬೋರ್ಡ್‌ಗೆ ಸೀಮಿತವಾಗಿ ಮಾತನಾಡಬೇಕು.

ಶ್ರೀ ಆರ್. ಅಶೋಕ್: ನಮ್ಮ ದೃಷ್ಟಿಯೇನೆಂದರೆ ಈ ಬಗ್ಗೆ ತಮಗೆ ಮಾಹಿತಿ ಕೊಡಬೇಕು, ತಮ್ಮ ಹಾಗೂ ಈ ಸದನದ ಮೂಲಕ ರಾಜ್ಯದ ಜನತೆಗೆ ಮಾಹಿತಿ ತಲುಪಬೇಕು.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು): ಪ್ರತಿಪಕ್ಷದವರು ಏನೋ ಬಹಳ ದೊಡ್ಡ ಹಗರಣ 300–500 ಕೋಟಿ ರೂಪಾಯಿಗಳದ್ದು ಆಗಿದೆ ಎಂದು ಹೇಳಿದರು. ಬಹಳ ದೊಡ್ಡ irregularities, ಭ್ರಷ್ಟಾಚಾರವಾಗಿದೆ ಎನ್ನುವ ಮಾತನ್ನು ತಾವು ಎಷ್ಟೇ request ಮಾಡಿದರೂ ಪದೇ ಪದೇ ಹೇಳುತ್ತಿದ್ದಾರೆ. ಈ ರೀತಿ ಯಾವುದಾದರೂ ಉದ್ದೇಶಕ್ಕೆ ಸರ್ಕಾರ ಜಮೀನನ್ನು ಪಡೆದುಕೊಳ್ಳುವಂಥ ಸಂದರ್ಭದಲ್ಲಿ ಹೌಸಿಂಗ್ ಬೋರ್ಡ್ ಇರಬಹುದು, ಬೇರೆ ಯಾವುದೇ ರೀತಿಯಲ್ಲಿ ಇದ್ದರೂ ಯಾವ ರೀತಿಯಲ್ಲಿ ಹಿಂದಿನ ಸರ್ಕಾರಗಳು ತೀರ್ಮಾನ ಮಾಡಿವೆ, ಯಾವ ರೀತಿಯಾಗಿ ನಡೆದುಕೊಂಡಿದ್ದಾರೆ ಎಂಬುದನ್ನು ನೋಡಬೇಕಾಗುತ್ತದೆ. ಅದು ಬಿಟ್ಟು ರೈತರಿಗೆ ಅನ್ಯಾಯ ಮಾಡಿದ್ದಾರೆ ಎಂದು ಹೇಳುತ್ತಾರೆ. GPA holdersಗೆ ಹಿಂದಿನ ಸರ್ಕಾರ ಯಾರೂ ಕೊಟ್ಟಿಲ್ಲವೇ? ಅವರ ಗಲಾಟೆಯಲ್ಲಿ ನಮ್ಮ ಸರ್ಕಾರಕ್ಕೆ ಹೇಳುವುದಕ್ಕೆ ಅವಕಾಶವೇ ಸಿಕ್ಕಿಲ್ಲ. ಅದಕ್ಕಾಗಿ ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ನನಗೆ 10 ನಿಮಿಷ ಮಾತನಾಡಲು ಅವಕಾಶ ಕೊಡಿ ಮುಗಿಸುತ್ತೇನೆ.

ಅಧ್ಯಕ್ಷರು: ಅಶೋಕರವರು ಮಾತನಾಡಿದ ಮೇಲೆ ಮತ್ತು ಉಳಿದವರು ಮಾತನಾಡಿದ ಮೇಲೆ ನಾನು ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಹಿಂದಿನ ಸರ್ಕಾರಗಳ ತೀರ್ಮಾನದಿಂದ ರಾಜ್ಯ ಬೊಕ್ಕಸಕ್ಕೆ ಏನು ನಷ್ಟವಾಗಿದೆ ಮತ್ತು ಅವರ irregularities ಅನ್ನು ಬೇರೆ ಬೇರೆ ಇಲಾಖೆಗಳಲ್ಲಿ ಏನು ಮಾಡಿದ್ದಾರೆ ಎಂಬುದನ್ನು ಹೇಳಿದರೆ ಅವರಿಗೆ ಯಾವ ನೈತಿಕ ಹಕ್ಕು ಇದೆಯೆಂದು ಇವತ್ತು ಜನತೆಗೆ ಗೊತ್ತಾಗಬೇಕಾಗಿದೆ.

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು): ಪ್ರಶ್ನೆ ಇರುವುದು KHBಯದ್ದು ಅಥವಾ ಮತ್ತೆ ಯಾವುದೋ ಅಲ್ಲ. ಪ್ರಶ್ನೆ ಇರುವುದು ಬೆಂಗಳೂರಿನ ಸುತ್ತಮುತ್ತಲಿನ ಜಮೀನಿನ ಬೆಲೆಗಳು ಯಾವ ಪ್ರಮಾಣದಲ್ಲಿದೆ ಎನ್ನುವುದು. KIADB ತೆಗೆದುಕೊಳ್ಳಿ, KHB ತೆಗೆದುಕೊಳ್ಳಿ ಅಥವಾ ಇನ್ನ್ಯಾವುದಾದರೂ ವೈಯಕ್ತಿಕವಾಗಿ ತೆಗೆದುಕೊಳ್ಳಿ, ಅವರಿಗೆ ಏನು ಬೆಲೆಗೆ ಸಿಗುತ್ತಿದೆ ಎಂಬುದು ಮುಖ್ಯ. ಮೂವತ್ತು ಕಿಲೋ ಮೀಟರ್ ದೂರವಿರುವಂಥ ರಾಮನಗರದ ಅರ್ಚಕನ ಹಳ್ಳಿಯಲ್ಲಿ ಒಂದೂವರೆ ಲಕ್ಷ ಬೆಲೆ ಇರುವುದಕ್ಕೆ 50 ಲಕ್ಷ ಬೆಲೆ ಬಾಳುವಷ್ಟು ದುಡ್ಡು ಕೊಡುತ್ತಾರೆ. ಒಂದೂವರೆ ಲಕ್ಷ ಬೆಲೆ ಇರುವಂಥಾದ್ದರಲ್ಲಿ ಇವರು ಇವತ್ತು 50 ಲಕ್ಷ ಬೆಲೆ ಕೊಡುವುದಕ್ಕೆ ತಯಾರಿದ್ದಾರೆ. ಅಲ್ಲಿ ಬೆಲೆಗಳನ್ನು ಏರಿಸುತ್ತಾರೆ. ಅಶೋಕರವರ ಚರ್ಚೆಗೆ ಜೋಡಿಸುತ್ತಾ, ಇನ್ನೊಂದು ಉದಾಹರಣೆ ಹೇಳುತ್ತೇನೆ. ಹಾಸನ ಜಿಲ್ಲೆಯಲ್ಲಿ ವಿಮಾನ ನಿಲ್ದಾಣದ ಅಭಿವೃದ್ಧಿ ಸಲುವಾಗಿ ಜಮೀನನ್ನು ತೆಗೆದುಕೊಂಡಿದ್ದಾರೆ. ಅಲ್ಲಿರತಕ್ಕಂಥ ಬೆಲೆ ಏನು? ಅಲ್ಲಿಯ guidance value ಇರತಕ್ಕಂಥಾದ್ದು 42 ಸಾವಿರ ರೂಪಾಯಿಗಳು. ಆದರೆ, ಕೊಟ್ಟಿರುವುದು 11 ಲಕ್ಷ. ಹಾಸನ ಜಿಲ್ಲೆಯಲ್ಲಿ ಕೊಡಬಹುದು, ರಾಮನಗರ ಜಿಲ್ಲೆಯಲ್ಲಿ ಕೊಡಬಹುದು. ಆದರೆ, ಇದನ್ನು ಕೋಲಾರ ಜಿಲ್ಲೆಯಲ್ಲಿ ಕೊಟ್ಟರೆ, ಅಲ್ಲಿ ಬೆಲೆ ಇದೆ ಎಂಥಾದರೆ, ಪಕ್ಕದಲ್ಲಿ KIADBಯಿಂದ ತೆಗೆದುಕೊಳ್ಳುವ ಬೆಲೆ ಅಷ್ಟಕ್ಕೇ ಇದೆ, KHB ಯಲ್ಲಿ ತೆಗೆದುಕೊಳ್ಳುವ ಬೆಲೆ ಜಾಸ್ತಿಯಾಗಬಾರದು. ಬಿಜೆಪಿ ಸರ್ಕಾರವಿದೆ, ಆದ್ದರಿಂದ ಜಾಸ್ತಿಯಾಗಬಾರದು. ಈ ಮೊಂಡು ವಾದ ಅವರದು.

ಶ್ರೀ ಬಿ.ಎಸ್. ಯಡಿಯೂರಪ್ಪ: ಪ್ರತಿಪಕ್ಷದ ನಾಯಕರು ಹಾಗೂ ಸದಸ್ಯರು ಇಲ್ಲದೇ ಇದ್ದಾಗ ತಮಗೂ ಮುಜುಗರವಾಗುತ್ತದೆ, ನಮಗೂ ಮುಜುಗರವಾಗುತ್ತದೆ. ಹೆಚ್ಚು ಚರ್ಚೆ ಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ.

ಅಧ್ಯಕ್ಷರು: Detail ಆಗಿ ಹೋಗುವುದಕ್ಕೆ ಆಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಹೇಳುವುದಕ್ಕೆ ಇಚ್ಛೆ ಪಡುವುದೇನೆಂದರೆ, ಮಾನ್ಯ ಕೃಷ್ಣಯ್ಯ ಶೆಟ್ಟರು ಹಾಗೂ ಜಿ.ಟಿ.ದೇವೇಗೌಡರು ಕ್ಯಾಬಿನೆಟ್ ರ್ಯಾಂಕ್ ಪಡೆದಿರುವಂಥವರು ಅಷ್ಟೆ. ಅವರು ministers ಅಲ್ಲ. ಅವರ ಬಗ್ಗೆ ನಾವು ತನಿಖೆ ಮಾಡಿಸುತ್ತಿಲ್ಲ. ಆ ವ್ಯವಹಾರಗಳು ಏನಾಗಿದೆ, ಅದರ ಬಗ್ಗೆ Additional Chief Secretaryಯಿಂದ ಮಾಡಿಸುತ್ತೇನೆ ಎಂದು ಹೇಳಿದ್ದೆ. ನಾನು ಈ ಸೂರ್ಯನಗರ ಸೇರಿ, ಕಳೆದ ಐದು ವರ್ಷಗಳಿಂದ ಏನು ಈ KHB ಭೂಸ್ವಾಧೀನ ಮಾಡಿರುವುದರ ಬಗ್ಗೆ Chief Secretaryಯಿಂದ ತನಿಖೆ ಮಾಡಿಸಿ, ಆರು ತಿಂಗಳೊಳಗೆ ವರದಿಯನ್ನು ಕೊಡಬೇಕು ಎನ್ನುವ ಸೂಚನೆಯನ್ನು ಅವರಿಗೆ ಕೊಡುತ್ತೇನೆ. ಎರಡನೇಯದು ಏನೆಂದರೆ, ಆ ವರದಿ ಬರುವವರೆಗೆ, KHBಯಿಂದ ಮೈಸೂರು ಇರಬಹುದು, ಬೆಂಗಳೂರು ಇರಬಹುದು, ರಾಜ್ಯದ ಯಾವುದೇ ಭಾಗದಲ್ಲಿರಬಹುದು, ಒಂದು ಎಕರೆ ಜಮೀನನ್ನೂ ನಾವು ಹೊಸದಾಗಿ acquire ಮಾಡಿಕೊಳ್ಳುವುದಿಲ್ಲ. ಇವತ್ತು ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ direction ಕೊಡುತ್ತೇನೆ. ಇವತ್ತು ಅವರು ಕೆಲವು ವಿಷಯಗಳಲ್ಲಿ ಹಠ ಮಾಡಿದರು. ಯಾವುದೇ ಕಾರಣಕ್ಕೂ ರಾಜ್ಯದ ಜನತೆಗೆ ಗೊತ್ತಾಗಬೇಕು. ಕಳೆದ ಒಂದು ವರ್ಷದಿಂದ ಯಾವುದೇ ವಿಧಾನಮಂಡಲದ ಕಾರ್ಯಕಲಾಪ ಬೆಳಗಾವಿಯಲ್ಲಿ ಇರಬಹುದು ಅಥವಾ ಇಲ್ಲಿ ಇರಬಹುದು, ನಡೆಯುವುದಕ್ಕೆ ಬಿಡಲಿಲ್ಲ. participate ಮಾಡಲಿಲ್ಲ. ಈ ರೀತಿ ನೆಪ ಮಾಡಿಕೊಂಡು ಮುಂದೆ ಹೋದರು, ಏಕೆ? ಈ ರಾಜ್ಯದ ಅಭಿವೃದ್ಧಿ ಕಾರ್ಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವರಿಗೆ ಇಷ್ಟವಿಲ್ಲ. ಬೆಟ್ಟು ಮಾಡಿ ತೋರಿಸುವುದಕ್ಕೆ ಏನೂ ಇಲ್ಲ. ಮಾನ್ಯ ಸಭಾಧ್ಯಕ್ಷರೆ, ಮೊನ್ನೆ ನಿಮ್ಮ ಕೊಠಡಿಯಲ್ಲಿ ಏನು ಆಯಿತು? ಅಧಿವೇಶನ ಇನ್ನೂ ಹೆಚ್ಚು ದಿನ ನಡೆಯಬೇಕು ಎಂದು ಹೇಳಿದರು. ಈ ತಿಂಗಳ ಕೊನೆಯವರೆಗೆ ಚರ್ಚೆ ಮಾಡುವುದಕ್ಕೋಸ್ಕರ ನಾವು ready ಇದ್ದೇವೆ ಎಂದು ಹೇಳಿದೆವು. ಅವಕಾಶ ಸಿಕ್ಕಾಗ ಇವರು ಚರ್ಚೆ ಮಾಡುವುದಕ್ಕೆ ಸಿದ್ಧವಿಲ್ಲ. ನಿಮ್ಮ ಕೊಠಡಿಯಲ್ಲಿ ಬಂದು clarification ಕೇಳುವುದಕ್ಕಾಗಲಿಲ್ಲವೆಂದರೆ, ಮತ್ತೆ ಒಂದು ದಿವಸ ಪೂರ್ತಿ ಚರ್ಚೆ ಮಾಡಿ, ನಾನು ಉತ್ತರ ಕೊಡುವುದಕ್ಕೆ ಸಿದ್ಧನಿದ್ದೇನೆ ಎಂದು ಹೇಳಿದೆ. ಅದಕ್ಕೂ ಅವರು ಸಿದ್ಧವಿಲ್ಲ. ಸನ್ಮಾನ್ಯ ಸಭಾಧ್ಯಕ್ಷರೆ, ಕಳೆದ ಐದು ವರ್ಷಗಳಲ್ಲಿ ಈ ಗೃಹ ಮಂಡಳಿ ಇಲಾಖೆಯಲ್ಲಿ ಏನೇನು ಜಮೀನುಗಳು ಖರೀದಿಯಾಗಿವೆ ಇದೆಲ್ಲದರ ಬಗ್ಗೆ

ಸಮಗ್ರ ಒಂದು ವರದಿಯನ್ನು ಕೊಡುವುದಕ್ಕೆ Chief Secretaryಗೆ ಇವತ್ತೇ ನಾನು ಆದೇಶ ಮಾಡುತ್ತಿದ್ದೇನೆ. ಅಲ್ಲಿಯವರೆಗೆ, ಇನ್ನೂ ಆರು ತಿಂಗಳು ಒಂದು ಎಕರೆ ಜಮೀನನ್ನು ಕೂಡ ನಮ್ಮ ಕರ್ನಾಟಕ ಗೃಹ ಮಂಡಳಿಯಿಂದ ನಾವು ಖರೀದಿ ಮಾಡುವುದಿಲ್ಲ. ಅಭಿವೃದ್ಧಿ ಮಾಡುವ ಬಗ್ಗೆ ಮಾತ್ರ ಕರ್ನಾಟಕ ಗೃಹ ಮಂಡಳಿಯವರು ಕೆಲಸ ಮಾಡಬೇಕೇ ಹೊರತು, ಜಮೀನುಗಳನ್ನು ಖರೀದಿ ಮಾಡಕೂಡದು. ಯಾರ್ಯಾರ ಕಾಲದಲ್ಲಿ guidance value ಎಷ್ಟು ಇತ್ತು, ಅದರ 10–15 ಪಟ್ಟು ಹೆಚ್ಚಾಗಿ ಕೊಟ್ಟು, ಅದು ರಾಮನಗರದಲ್ಲಿ 125 ಎಕರೆ ಜಮೀನನ್ನು ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯಕ್ಕೆ ನಲವತ್ತು ಲಕ್ಷ ರೂಪಾಯಿಗಳಂತೆ ಖರೀದಿ ಮಾಡಿದರು. ಇದು ರಾಜ್ಯದ ಜನತೆಗೆ ಅರ್ಥವಾಗಬೇಕು. ಅವತ್ತು guidance value ಎರಡು ಲಕ್ಷ ರೂಪಾಯಿ ಇತ್ತು. ಎರಡು ಲಕ್ಷ ಇದ್ದ guidance value ಅನ್ನು ಇದ್ದಕ್ಕಿದ್ದ ಹಾಗೆ ಇದಕ್ಕೋಸ್ಕರ ಖುಷ್ಕಿಗೆ 20 ರಿಂದ 22 ಲಕ್ಷ, ಭಾಗಾಯತ್‌ಗೆ 25 ಲಕ್ಷ ಎಂದು Guidance value ಅನ್ನು ತಾತ್ಕಾಲಿಕವಾಗಿ ಮಾಡಿಸಿ, ಅವರು ಎಕರೆಗೆ 40 ಲಕ್ಷ ರೂಪಾಯಿಗಳಂತೆ ಖರೀದಿ ಮಾಡಿದ್ದಾರೆ. ಆದ್ದರಿಂದ, ಮೊದಲನೇಯದಾಗಿ KHBಗೆ ಸಂಬಂಧಪಟ್ಟಂತೆ ಈ ರೀತಿ acquisition ಆಗಿರುವ ಎಲ್ಲದರ ಬಗ್ಗೆ ಸಮಗ್ರವಾದ ತನಿಖೆ ಮಾಡುವುದಕ್ಕೆ ಇವತ್ತೇ ಮುಖ್ಯ ಕಾರ್ಯದರ್ಶಿಯವರಿಗೆ ಆಜ್ಞೆ ಮಾಡುತ್ತೇನೆ. ಅಲ್ಲಿಯವರೆಗೆ, ಇಡೀ ರಾಜ್ಯದಲ್ಲಿ KHBಯಿಂದ ಒಂದು ಎಕರೆ ಜಮೀನನ್ನೂ ಸಹ ನಾವು ಖರೀದಿ ಮಾಡುವುದಿಲ್ಲವೆಂಬ ಭರವಸೆಯನ್ನು ಈ ಮನೆಯ ಮೂಲಕ ರಾಜ್ಯದ ಜನತೆಗೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಶಿವಮೊಗ್ಗ ಏರ್‌ಪೋರ್ಟ್‌ಗಾಗಿ 6–7 ಲಕ್ಷದವರೆಗೆ ಜಮೀನನ್ನು acquire ಮಾಡಿಕೊಂಡೆವು. Un-authorised cultivation ಮಾಡಿದಂಥ ರೈತರಿಗೂ ತೊಂದರೆಯಾಗದಂತೆ ಮಾಡಿಕೊಂಡೆವು. ಇದು ರೈತರ ಪರವಾಗಿ ಇರುವ ಸರ್ಕಾರ. General Power of Attorney ತೆಗೆದುಕೊಂಡು ಮಧ್ಯದಲ್ಲಿ ರೈತರ ಪರವಾಗಿ ಬೇರೆ ಬೇರೆಯವರು ಬಂದು ದುಡ್ಡು ತೆಗೆದುಕೊಳ್ಳುವ ಕೆಲಸ ಮಾಡುತ್ತಿದ್ದಾರೆ ಎಂದು ಪ್ರತಿಪಕ್ಷದ ನಾಯಕರು ಅತ್ಯಂತ ಪ್ರಮುಖವಾದ ವಿಚಾರವನ್ನು ಪ್ರಸ್ತಾಪ ಮಾಡಿದರು. ಇದು ನಾನು ಬಂದ ಮೇಲೆ ಮಾಡಿದ್ದಲ್ಲ. ಇಡೀ ರಾಜ್ಯದಲ್ಲಿ ಜಮೀನ್ದಾರರಿಂದ, ರೈತರಿಂದ General Power of Attorney ತೆಗೆದುಕೊಂಡು ಮಾರಾಟ ಮಾಡುವುದು ಇದೆ ಎಂಬುದು ತಮಗೂ ಗೊತ್ತಿದೆ.

ಇದು ಬೇಡವೆಂದು ಹೇಳುವುದಕ್ಕೆ ನಮಗೆ ಕಾನೂನಿನಲ್ಲೂ ಅವಕಾಶವಿಲ್ಲ. ಇದರ ಬಗ್ಗೆ ಚರ್ಚೆ ಮಾಡೋಣ. ಬೇಕಾದರೆ ರೈತರಿಗೇ ನೇರವಾಗಿ ಕೊಡುವುದಕ್ಕೆ ಸಾಧ್ಯವಿದೆಯೆ ಎಂಬ ಬಗ್ಗೆ ಪರಿಶೀಲನೆ ಮಾಡುವುದಕ್ಕೂ ನಾನು ಸಿದ್ಧನಾಗಿದ್ದೇನೆ. ಯಾವುದೇ ದೃಷ್ಟಿಯಿಂದ ಈ ವ್ಯವಹಾರಗಳು ಕದ್ದು–ಮುಚ್ಚಿಯಾಗದೇ ನೇರವಾಗಿ ರೈತರಿಗೆ ಹಣ ಸಿಗಬೇಕು ಎನ್ನುವ ಬಗ್ಗೆ ನಾನು ಬದ್ಧನಾಗಿದ್ದೇನೆ. ಆದ್ದರಿಂದ, ಸುಸೂತ್ರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ನಾನು ಅವರಲ್ಲಿ ವಿನಂತಿ ಮಾಡಿದೆ. ಆ ಸಮಯದಲ್ಲಿ ನಾನು ಮೇಲ್ಮನೆಯಲ್ಲಿದ್ದೆ. ತಾವು ಕರೆದ ತಕ್ಷಣ ನಾನು ಇಲ್ಲಿಗೆ ಬಂದು ನಿಮ್ಮೊಂದಿಗೆ ಮಾತನಾಡಿದೆ. ಬೆಳಿಗ್ಗೆಯಿಂದ ಅವರ ಜೊತೆ ಮಾತನಾಡುವುದಕ್ಕೋಸ್ಕರ ಇಲ್ಲಿಯೇ ಕಾಯ್ದುಕೊಂಡು ಕುಳಿತಿದ್ದೇವೆ. ಮಾನ್ಯ ಸಿದ್ದರಾಮಯ್ಯನವರು ಮತ್ತು ರೇವಣ್ಣನವರ ಹತ್ತಿರ ನಿಮ್ಮ ಅಹವಾಲುಗಳು ಏನಿವೆ ಹೇಳಿ, ಅದನ್ನು ಸರಿಪಡಿಸುವುದಕ್ಕೆ ನಾವು ಸಿದ್ಧರಾಗಿದ್ದೇವೆ ಎಂದು ನಾವೇ ವಿನಂತಿಸಿಕೊಂಡೆವು. ಹಾಸನದಲ್ಲಿ ಏರ್‌ಪೋರ್ಟ್‌ಗಾಗಿ ಜಮೀನನ್ನು ತೆಗೆದುಕೊಂಡರು. Guidance value 2 ಲಕ್ಷದ 74 ಸಾವಿರ ರೂಪಾಯಿಗಳು ಇದ್ದುದ್ದನ್ನು 11 ಲಕ್ಷ ರೂಪಾಯಿಗಳಿಗೆ ಖರೀದಿ ಮಾಡಿದರು. ಹಾಸನ ಜಿಲ್ಲೆಯಲ್ಲಿ ಇರಬಹುದು ಅಥವಾ ರಾಮನಗರ ಜಿಲ್ಲೆಯಲ್ಲಿ ಇರಬಹುದು ಇಂತಹ ಬೇಕಾದಷ್ಟು ಉದಾಹರಣೆಗಳು ಇವೆ. ಆದ್ದರಿಂದ ಅವರುಗಳು ಬಂದ ಮೇಲೆ ಇದರ ಬಗ್ಗೆ ಒಂದು ದಿವಸ ಮೀಸಲಿಟ್ಟು, KHBಯಿಂದ, KIADBಯಿಂದ ಏನು ಭೂಮಿಯನ್ನು ಸ್ವಾಧೀನ ಮಾಡಿಕೊಂಡಿದ್ದಾರೆ ಅದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. KHBನಲ್ಲಿ ಕಳೆದ ಐದು ವರ್ಷಗಳಲ್ಲಿ ಏನು ಭೂಸ್ವಾಧೀನ ಮಾಡಿಕೊಂಡಿದ್ದಾರೆ ಅದರ ಬಗ್ಗೆ ಸಮಗ್ರ ತನಿಖೆ ಮಾಡುವುದಕ್ಕೆ ಮುಖ್ಯ ಕಾರ್ಯದರ್ಶಿಯವರಿಗೆ ಇವತ್ತೇ ಆದೇಶ ಮಾಡುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು): ನನ್ನ ಕ್ಷೇತ್ರ ಹೊಸಕೋಟೆ. ಅದರ ಬಾರ್ಡರ್‌ನಲ್ಲಿರುವ ಹೊಸಪೇಟೆ, ವೆಂಕಟಾಪುರ ಮತ್ತು ಜಂಗಮಕೋಟೆ ಗ್ರಾಮಗಳು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 7–8 ಕಿಲೋಮೀಟರ್ ದೂರದಲ್ಲಿವೆ. ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ

ಸಮೀಪದಲ್ಲೇ ಇವೆ. ನನ್ನ ಸ್ವಂತ ಗ್ರಾಮವಾದ ಬೆಂಡಗಾನಹಳ್ಳಿಯು ಅಲ್ಲೇ ಇದೆ. ಅಲ್ಲೆಲ್ಲಾ ಜಮೀನು 50 ಲಕ್ಷಕ್ಕೇ ಹೋಗುತ್ತಿದೆ. ಕರ್ನಾಟಕದಲ್ಲಿ ಯಾವ ಭಾಗದಲ್ಲೂ 2–3 ಲಕ್ಷಕ್ಕೆ ಜಮೀನು ಸಿಗುವುದಿಲ್ಲ. ಅಲ್ಲಿರತಕ್ಕಂಥ valueನೇ 50 ಲಕ್ಷ. ನಮ್ಮ ಸರ್ಕಾರದ ಮೇಲೆ, ಮಾನ್ಯ ಮುಖ್ಯಮಂತ್ರಿಗಳ ಮೇಲೆ ಇದು ಬಹುಕೋಟಿ ರೂಪಾಯಿಯ ಹಗರಣ ಎಂದು ಆಪಾದನೆ ಮಾಡಿದ್ದಾರೆ. 400–500 ಕೋಟಿಗಳ ಹಗರಣವೆಂದರೆ ಬಹುಕೋಟಿ ರೂಪಾಯಿಗಳ ಹಗರಣ ಹೇಗೆ ಆಗುತ್ತದೆ? ಇಲ್ಲಿ ಬಹುಕೋಟಿ ಹಗರಣ ಏನೂ ಆಗಿಲ್ಲ. 30 ಎಕರೆ ಜಮೀನು ತೆಗೆದಕೊಂಡು, 15 ಕೋಟಿ payment ಸಹ ಆಗಿದೆ. ಆದರೆ, ಅವರು ಇಲ್ಲಿ 400–500 ಕೋಟಿ, ಬಹುಕೋಟಿ ಎಂದು ಹೇಳುತ್ತಿದ್ದಾರೆ. ಅವರು ಯಾರಿಗೆ ಕೊಟ್ಟಿದ್ದಾರೋ ಅವರಿಗೆ ಗೊತ್ತಿದೆ. KIADB ಬಗ್ಗೆ ಚರ್ಚೆ ಮಾಡುವುದು ಬೇಡ ವಿಷಯಾಂತರವಾಗುತ್ತದೆ ಎಂದು ತಾವು ಹೇಳಿದ್ದೀರಿ. ರಾಜ್ಯಪಾಲರ ಕಾಲದಲ್ಲಿ ಆದಂಥಾದ್ದಕ್ಕೆ ನಮ್ಮ ಊರಿಗೆ ಪಕ್ಕದಲ್ಲಿರುವ ಬೂದಿಗೆರೆಯಲ್ಲಿ 55 ಲಕ್ಷ ರೂಪಾಯಿಗಳ value ಕೊಟ್ಟಿದ್ದಾರೆ.

ಇಲ್ಲಿ ನಮ್ಮ ಭಾಗದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಥವಾ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ವ್ಯಾಪ್ತಿಯಲ್ಲಿ 50–60 ಲಕ್ಷಕ್ಕೆ, 1 ಕೋಟಿಗೆ ಎಲ್ಲೂ ಜಮೀನು ಸಿಗುವುದಿಲ್ಲ. ಇವತ್ತು ಹೊಸಕೋಟೆಯಲ್ಲಿಯೇ ಒಂದು, ಒಂದೂವರೆ ಕೋಟಿ guidance value in National highwaysನಲ್ಲಿ ಇಟ್ಟಿದ್ದಾರೆ. ಖರೀದಿ ಮಾಡುವುದಕ್ಕೇ ಆಗುವುದಿಲ್ಲ, ಆ value ಅನ್ನು ನಮ್ಮಲ್ಲಿ ಇಟ್ಟಿರುವಂತಹ ವ್ಯವಸ್ಥೆ ಇದೆ. ಹಿಂದೆ ಇಟ್ಟಂಥ ಒಂದು ಲಕ್ಷ ಇತ್ತು, ಒಂದೂವರೆ ಲಕ್ಷ ಇತ್ತು ಎನ್ನುವುದೆಲ್ಲಾ ಇವತ್ತು ಹೋಗಿದೆ. Guidance value is different now. ಇವೆಲ್ಲಾ ಉದ್ದೇಶದಿಂದ ಮಾತನಾಡಬೇಕೇ ವಿನಹ, ಸುಮ್ಮನೆ ಎರಡು ದಿವಸದಿಂದ ಎರಡು ಪಕ್ಷಗಳೂ ಸೇರಿಕೊಂಡು ಇದು ಏನೋ ಹಗರಣವಾಗಿದೆಯೆಂದು ರಾಜ್ಯಕ್ಕೆ ತೋರಿಸುವಂಥಾದ್ದು, ಸದನದ ಕೆಲಸವನ್ನು ನಿಲ್ಲಿಸುವಂತೆ ಮಾಡುತ್ತಿದ್ದಾರೆ. ರಾಜಕೀಯ ಮಾಡುವುದೊಂದೇ ಉದ್ದೇಶ ಇವರದು. ರಾಜಕೀಯ ಮಾಡಬೇಕು, ಸದನ ನಡೆಯಬಾರದು, ಈ ಸದನದಲ್ಲಿ ಚರ್ಚೆ ನಡೆಯಬಾರದು, ಸದನವು ಮುಂದಕ್ಕೆ ಹೋಗುತ್ತಿರಬೇಕು ಇದೇ ನಾವು

ಕಾಣುತ್ತಿದ್ದೇವೆ. ಆದ್ದರಿಂದ ಮಾನ್ಯ ಅಧ್ಯಕ್ಷರು ತಾವು ತೀರ್ಮಾನ ಮಾಡಿ ಸದನದ ಕಲಾಪವನ್ನು ನಡೆಸುವಂತಹ ಕಾರ್ಯವನ್ನು ಮಾಡಿಕೊಡಬೇಕು.

ಅಧ್ಯಕ್ಷರು: ಮಾನ್ಯ ಗೌರವಾನಿತ್ವದ ಸದಸ್ಯರಲ್ಲಿ ಹೇಳುವುದೇನೆಂದರೆ, ನಿನ್ನೆ ಮತ್ತು ಇವತ್ತು ಎರಡು ದಿವಸ ಕಲಾಪ ನಡೆಯಲಿಲ್ಲ. ಹೀಗಾಗಿ ಬಹಳಷ್ಟು ವಿಷಯಗಳು ಹಾಗೆಯೇ ಪೆಂಡಿಂಗ್ ಇವೆ. ಅದು Zero hour ಇರಬಹುದು, Question hour ಇರಬಹುದು. Calling attentions ಮತ್ತು ಬಜೆಟ್ ಮೇಲಿನ ಚರ್ಚೆ ಇನ್ನೂ ಪ್ರಾರಂಭವಾಗಿಲ್ಲ. ಅದೇ ರೀತಿ ಹಲವಾರು ಬಿಲ್‌ಗಳು ಪೆಂಡಿಂಗ್‌ನಲ್ಲಿವೆ. ಒಂದೂ ಬಿಲ್ ಇದೂವರೆಗೂ ಪಾಸ್ ಆಗಿಲ್ಲ. ನಾನು ಸಭಾಧ್ಯಕ್ಷನಾದ ಮೇಲೆ ಮೊದಲಿನಿಂದಲೂ, ಧರಣಿ ಸತ್ಯಾಗ್ರಹವನ್ನು ಬಿಟ್ಟು, ಕಲಾಪ ನಡೆಯಬೇಕು, ಹೆಚ್ಚು ವಿಷಯಗಳ ಬಗ್ಗೆ ಚರ್ಚೆಯಾಗಬೇಕೆಂದು ಪದೇ ಪದೇ ಹೇಳುತ್ತಾ ಬಂದಿದ್ದೇನೆ. ವಿರೋಧ ಪಕ್ಷದ ನಾಯಕರು ಮತ್ತು ಎಲ್ಲಾ ಸದಸ್ಯರಿಗೂ ಹೇಳುತ್ತಲೇ ಬಂದಿದ್ದೇನೆ. ಆದರೆ, ನಿನ್ನೆ ಮತ್ತು ಇವತ್ತು ಸದನವು ನಡೆಯಲಿಲ್ಲ ಅದು ದುರಾದೃಷ್ಟಕರ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಅದಕ್ಕಾಗಿ ನಾನು ವಿರೋಧಪಕ್ಷದ ನಾಯಕರು ಮತ್ತು ಎಲ್ಲಾ ಗೌರವಾನ್ವಿತ ವಿರೋಧಪಕ್ಷದ ಸದಸ್ಯರಿಗೆ ಈ ಸದನದ ಮುಖಾಂತರ ಹೇಳುವುದೇನೆಂದರೆ, ದಯವಿಟ್ಟು ನಾಳೆಯಾದರೂ ಸದನವು ನಡೆಯಲು ತಾವು ಸಹಕಾರ ನೀಡಬೇಕು. ನಾಳೆ ಸದನಕ್ಕೆ ಬಂದು ಉಳಿದ ವಿಷಯಗಳ ಚರ್ಚೆಗೆ ಅವಕಾಶ ಕೊಡಬೇಕೆಂದು ಈ ಸಂದರ್ಭದಲ್ಲಿ ಅವರಿಗೆ ನಾನು ವಿನಂತಿ ಮಾಡುತ್ತಿದ್ದೇನೆ. ಇವತ್ತು ಉಳಿದ ಪ್ರೊಸೀಡಿಂಗ್ಸ್ ನಡೆಸಿಕೊಂಡು ಹೋಗಬಹುದಾಗಿತ್ತು. ಏಕೆಂದರೆ ಚರ್ಚೆ ಮಾಡಲು ಬಹಳಷ್ಟು ವಿಷಯಗಳಿವೆ. ಬಜೆಟ್ ಮೇಲೆ ಚರ್ಚೆ ಮಾಡಲಿಕ್ಕೆ ಈ ಕಡೆ ಆಡಳಿತ ಪಕ್ಷದ ಸದಸ್ಯರು ತಯಾರಿದ್ದಾರೆ. ಆದರೆ, ಇವತ್ತು ವಿರೋಧ ಪಕ್ಷದ ಸದಸ್ಯರು ಇಲ್ಲದೇ ಇರುವಂಥ ಸಂದರ್ಭದಲ್ಲಿ, ಸಂಪೂರ್ಣವಾಗಿ ಅವರು ಗೈರುಹಾಜರಾಗಿರುವ ಸಂದರ್ಭದಲ್ಲಿ ಉಳಿದಂತಹ ಪ್ರೊಸೀಡಿಂಗ್ಸ್ ಅನ್ನು ನಡೆಸಿಕೊಂಡು ಹೋಗುವುದು ಸರಿಯಾದಂಥ ಮಾರ್ಗವಲ್ಲ. ಆ ದೃಷ್ಟಿಯಿಂದ ನಾನು ಸದನವನ್ನು ಇವತ್ತು ..

(ಗೊಂದಲ)

ಶ್ರೀ ಜಿ. ಕರುಣಾಕರ ರೆಡ್ಡಿ: ಬಿಲ್ ಪಾಸ್ ಆಗಬೇಕಾಗಿದೆ. ...

ಅಧ್ಯಕ್ಷರು: ನಾನು ಒಪ್ಪಿಕೊಳ್ಳುತ್ತಿದ್ದೇನೆ ಇವತ್ತು ಬಿಲ್ ಪಾಸ್ ಆಗಬೇಕಾಗಿತ್ತು, ಬಹಳ ಮಹತ್ವವಾದ ಬಿಲ್ ಇದೆ. ನಿಮ್ಮ ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ಬಿಲ್ ಇದೆ. ಆದರೆ, ಪ್ರತಿಪಕ್ಷದ ನಾಯಕರು ಇಲ್ಲದಂತಹ ಸಮಯದಲ್ಲಿ ಅವರ ಗೈರುಹಾಜರಿಯಲ್ಲಿ ಇವತ್ತು ಪಾಸ್ ಮಾಡುವುದು ಸರಿಯಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು: ನಾನು ಒಪ್ಪಿಕೊಳ್ಳುತ್ತೇನೆ, ನೆರೆ ಹಾವಳಿ ಬಂದಿದೆ, ಬಹಳಷ್ಟು ವಿಷಯಗಳನ್ನು ಮಾತನಾಡಬೇಕಾಗಿದೆ, ಆದರೆ..

ಶ್ರೀ ಬಸವರಾಜ ಬೊಮ್ಮಾಯಿ: ನಾನು ಒಂದು statement ಮಾಡುತ್ತೇನೆ.

ಅಧ್ಯಕ್ಷರು: ನಾಳೆ ಮಾಡುವಿರಂತೆ, ಈ ಸದನವನ್ನು ನಾಳೆ ಬೆಳಗ್ಗೆ 10 ಗಂಟೆ 30 ನಿಮಿಷಕ್ಕೆ ಸೇರುವಂತೆ ಮುಂದಕ್ಕೆ ಹಾಕಿದ್ದೇನೆ. ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 10 ಗಂಟೆ 30 ನಿಮಿಷಕ್ಕ ಸೇರುವುದು.

(ಸದನವು ಸಂಜೆ 4 ಗಂಟೆ 43 ನಿಮಿಷಕ್ಕೆ ಮುಕ್ತಾಯಗೊಂಡು
ಪುನಃ ದಿನಾಂಕ 17ನೇ ಜುಲೈ 2009ರ ಶುಕ್ರವಾರ
ಬೆಳಿಗ್ಗೆ 10 ಗಂಟೆ 30 ನಿಮಿಷಕ್ಕೆ ಸೇರಲು ನಿಃಶ್ಚಯಿಸಿತು)